# ಕಲ್ವಾರಿಯ ಅದ್ಭುತಗಳು[1]

## ಮತ್ತಾಯ 27:45, 46, 50-54; ಮಾರ್ಕ 15:33, 37-39; ಲೂಕ 23:44-48; ಯೋಹಾನ 19:28, 30,

## ಒಂದು ನಿಕಟ ನೋಟ

ಎವರೆಸ್ಟ್ ಪರ್ವತ ಶ್ರೇಣಿಗಳಲ್ಲಿ ಸುಂದರವಾದ ಅನೇಕ ಶಿಖರಗಳು ಇವೆ, ಆದರೆ ಎವರೆಸ್ಟ್ ಶಿಖರವು ಉನ್ನತವಾಗಿರುವ ಕಾರಣ ಇತರೆ ಪರ್ವತಗಳ ಬಗ್ಗೆ ನಾವುಗಳು ಕೇಳಲ್ಪಟ್ಟಿರುವದಿಲ್ಲ.[2] ಎವರೆಸ್ಟ್‌ನ ಸೌಂದರ್ಯವು ಅವೆಲ್ಲವುಗಳನ್ನು ಮೀರಿಸಿರುತ್ತದೆ. ಅದೇ ರೀತಿ ಯಲ್ಲಿ ಯೇಸುವಿನ ಶಿಲುಬೆಯ ಸುತ್ತಲೂ ಅನೇಕ ಅದ್ಭುತಗಳು ಜರುಗಿರುತ್ತವೆ: ಸೂರ್ಯನು ಕತ್ತಲಾದನು, ದೇವಾಲಯದ ತೆರೆಯು ಇಬ್ಭಾಗವಾಯಿತು, ಮತ್ತು ಸಮಾಧಿಗಳು ತೆರೆಯಲ್ಪಟ್ಟು, ನಿದ್ರೆಹೋದ ಭಕ್ತರು ಪುನರುತ್ಥಾನ ಹೊಂದಿದ್ದು. ಕ್ರಿಸ್ತನ ಮರಣವನ್ನು ಹೆಚ್ಚು ಗಮನಿಸಿರುವ ನಾವುಗಳು, ಈ ಸಂಗತಿಗಳನ್ನು ಹೆಚ್ಚು ಗಮನಿಸಿರುವದಿಲ್ಲ.

ಈ ಅಲೌಕಿಕ ಸಂಗತಿಗಳು, "ಕಲ್ವಾರಿಯ ಚಿಕ್ಕ ಗುಡ್ಡಗಳಾಗಿವೆ." ಇದರ ಅರ್ಥದಲ್ಲಿ ಒಬ್ಬನು, ಯೇಸುವಿನ ತ್ಯಾಗದ ಅದ್ಭುತವನ್ನು ಅರಿಯಬಹುದಾಗಿದೆ. William Nicholson ರವರು, "ಈ ಕುರಿತು ಈ ಎಲ್ಲಾ ಅದ್ಭುತಗಳು ಕ್ರಿಸ್ತನ ಮರಣದ ಸುತ್ತ ಹೆಣೆಯಲ್ಪಟ್ಟು. ನಿತ್ಯವಾದ ರಕ್ಷಣೆಯ ಅರ್ಥವನ್ನು ನೀಡುತ್ತದೆ."[3] "ಕಲ್ವಾರಿಯ ಅದ್ಭುತಗಳನ್ನು" ಗಮನಿಸುವಾಗ, ಯೇಸು ನಮಗಾಗಿ ಮಾಡಿದ ಕಾರ್ಯಗಳನ್ನು ಅರಿಯುವಂತಾಗಲಿ ಎಂಬುದು ನನ್ನ ಪ್ರಾರ್ಥನೆಯಾಗಿದೆ.

## ಕತ್ತಲೆ: ಒಂದು ದೈವೀಕ ದುರ್ಲಕ್ಷಣ[4]

## (ಮತ್ತಾಯ 27:45, 46; ಮಾರ್ಕ 15:33; ಲೂಕ 23:44, 45ಎ)

### ನಡೆದ ಘಟನೆ

ಗೊಲ್ಗಥದ ಚಿತ್ರಣವನ್ನು ಮನಸ್ಸಿನಲ್ಲಿ ಊಹಿಸಿಕೊಳ್ಳಿ. ಮುಂಜಾನೆ 9ರಿಂದ ಮಧ್ಯಾಹ್ನದವರೆಗೆ ಅನೇಕ ಚಟುವಟಿಕೆಗಳು ಜರುಗಿದವು. ಯೇಸು ತನ್ನ ವೈರಿಗಳಿಗಾಗಿ ಪ್ರಾರ್ಥಿಸುತ್ತಿದ್ದನು, ತಾಯಿಯ ಜವಾಬ್ದಾರಿಯನ್ನು ವಹಿಸಿಕೊಟ್ಟಿದ್ದನು, ಕಳ್ಳನನ್ನು ರಕ್ಷಿಸುತ್ತಾ ಉಸಿರಾಟದ ತೊಂದರೆಯನ್ನು ಅನುಭವಿಸುತ್ತಿದ್ದನು. ವೈರಿಗಳು ಯೇಸುವಿನ ನಿಲುವಂಗಿಗಾಗಿ ಚೀಟು ಹಾಕುತ್ತಿದ್ದರು, ಆತನಿಗೆ ಅವಮಾನ ಮಾಡುತ್ತಿದ್ದರು. ಸ್ತ್ರೀಯರು ಅಳುತ್ತಾ, ಯೇಸುವಿನ ತಾಯಿಯನ್ನು ಆ ಸ್ಥಳದಿಂದ ಕರೆದೊಯ್ಯುತ್ತಿದ್ದರು. ತಕ್ಷಣವೇ ಸಕಲ ಚಟುವಟಿಕೆಗಳು ಸ್ಥಗಿತಗೊಂಡವು ಕತ್ತಲು ಆ ಸ್ಥಳವನ್ನು ಆವರಿಸಿತು: "ಇಷ್ಟರಲ್ಲಿ ಹೆಚ್ಚು ಕಡಿಮೆ ಮಧ್ಯಾಹ್ನವಾಯಿತು ಆಗಲಿಂದ ಸೂರ್ಯನು ಕಾಂತಿಗೊಂಡಿದ್ದನು, ಮೂರು ಗಂಟೆಯ ತನಕ ಆ ದೇಶದ ಮೇಲೆಲ್ಲಾ ಕತ್ತಲೆ ಕವಿಯಿತು" (ಲೂಕ 23:44, 45ಎ; ನೋಡಿ ಮತ್ತಾಯ 27:45; ಮಾರ್ಕ 15:33).

ಈ ಕತ್ತಲೆಯ ಬಗ್ಗೆ ಹೆಚ್ಚು ಮಾಹಿತಿ ಇರುವದಿಲ್ಲ. ಅದರ ಪೂರ್ಣತೆಯನ್ನು ನಾನು ಅರಿಯೆನು, ಅಂದರೆ ಆ ಕತ್ತಲಿನ ನಿಮಿತ್ತ ಮನುಷ್ಯನ ಮುಖದ ಮುಂದೆ ಇದ್ದ ಕೈಗಳು ಸಹ

ಕಾಣದೆ ಇರಬಹುದು. ಅದರ ಮುಂದುವರಿಕೆಯನ್ನು ಸಹ ಅರಿಯದ; ಸ್ಥಳೀಯವಾಗಿ ಅಥವಾ ಯೂದಾಯದಲ್ಲೆಲ್ಲಾ ಕತ್ತಲು ಪಸರಿಸಿರಬಹುದು. ಆದಿಯಲ್ಲಿದ್ದ ಪ್ರೇರಿತವಲ್ಲದ ಕ್ರೈಸ್ತ ಹಾಗೂ ಕ್ರೈಸ್ತೇತರ ಪ್ರೇರಿತವಲ್ಲದ ಬರವಣಿಗೆಯ ಪ್ರಕಾರ, ಕ್ರೈಸ್ತ ನಂಬಿಕೆ ಇಲ್ಲದವರಾದ ರೋಮಾಯರು ಸಹ ಇದರ ಕುರಿತ ತಮ್ಮ ಪೂರ್ವಕಾಲ ವೃತ್ತಾಂತದಲ್ಲಿ ದಾಖಲಿಸಿರುವರು.[5]

ಇದರ ಕುರಿತು: ಕತ್ತಲೆಯು, ಸಹಜವಾದ ಕತ್ತಲಾಗಿರಲಿಲ್ಲ. ಕೆಲವರು ಇದನ್ನು ಚಂದ್ರಗ್ರಹಣ ಎಂದು ವಿವರಿಸಿದ್ದಾರೆ. ಆದರೆ ಪಸ್ಕ[6] ಹಬ್ಬದ ಸಂದರ್ಭದಲ್ಲಿ ಚಂದ್ರಗ್ರಹಣ ಅಸಾಧ್ಯ. ಇನ್ನೂ ಕೆಲವರು ಇದನ್ನು ಮೋಡ ಕವಿದ ವಾತಾವರಣ, ಅಥವಾ ಮರಳಿನ ಬಿರುಗಾಳಿ ಎಂದಿರುವರು, ಆದರೆ ಈ ಸಾಧಾರಣ ಕಾರ್ಯಗಳನ್ನು ಸುವಾರ್ತಾ ಬರಹಗಾರರು ಒಪ್ಪಿರುವದಿಲ್ಲ. ಆದರೆ ಆ ಕತ್ತಲು ಅಲೌಕಿಕವಾದದ್ದು ಎಂಬುದಕ್ಕೆ ಅನೇಕ ಕಾರಣಗಳಿವೆ. ಅದರಲ್ಲಿ ಸಮಯ[7] ಮತ್ತು ಶಿಲುಬೆಯ ಬಳಿಯಿದ್ದವರ ಮೇಲೆ ಬಿದ್ದ ಪರಿಣಾಮಗಳು ಒಳಗೊಂಡಿವೆ.[8]

**ಅದರ ಅರ್ಥವೇನು**

ಆ ಕತ್ತಲೆಯು ದೇವರು ತಾನೇ ನೀಡಿದ *ಒಂದು ಲಕ್ಷಣವಾಗಿದೆ*: ಅದು ಮನುಷ್ಯ ನಿರ್ಮಿತವಾದ ಸಂಕೇತವಲ್ಲ ಆದರೆ ಅದು ದೇವರ ನಿರಂತರವಾದ ಯೋಜನೆಯಾಗಿತ್ತು. ಜನರು ಪರಲೋಕದಿಂದ ಒಂದು ಗುರುತನ್ನು ಬಯಸಿದ್ದರು (ಮತ್ತಾಯ 16:1; ಮಾರ್ಕ 8:11; ಲೂಕ 11:16); ಅವರು ಬಯಸದೆ ಇದ್ದ ಒಂದು ಗುರುತನ್ನು ಈಗ ಪಡೆದರು. ಕತ್ತಲೆಯು ವೇದನೆಯ *ಸಂಕೇತ*: ಆತನು ವೇದನೆಯಿಂದ ನಮಗಾಗಿ ಪ್ರಾಣ ಬಿಟ್ಟನು (1 ಕೊರಿಂಥ 15:3).[9] ಅದು ಬಾಧೆಯ ಒಂದು *ಸಂಕೇತವಾಗಿತ್ತು*: ಕ್ರಿಸ್ತನ ಹಾಗೂ ದುಷ್ಟ ಆತ್ಮಗಳ ನಡುವಿನ ಹೋರಾಟದ ಉತ್ತುಂಗವಾಗಿತ್ತು (ಆದಿಕಾಂಡ 3:15; ಲೂಕ 22:53; ಇಬ್ರಿಯ 2:14). ಅದು ಪ್ರತ್ಯೇಕತೆಯ *ಸಂಕೇತವಾಗಿತ್ತು*: ಯೇಸು ತಂದೆಯಿಂದ ಕೈ ಬಿಡಲ್ಪಟ್ಟವನಾಗಿ, ಪಾಪದ ಪರಿಹಾರವನ್ನು ನೀಡಿದನು (ನೋಡಿ ಮತ್ತಾಯ 27:46).

ಯುಗದ ಅಗಮ್ಯವಾದ ರಹಸ್ಯದ ಮೇಲೆ ದೇವರು ಕತ್ತಲನ್ನು ಬರಮಾಡಿದ್ದನು: ಮಿಲಿಯಾಂತರ ಜನರಿಗಾಗಿ ಒಬ್ಬನು ತನ್ನ ಪ್ರಾಣವನ್ನು ಅರ್ಪಿಸಿದನು. ಯೇಸುವಿನ ಈ ಸಮಯದಲ್ಲಿ ಮೌನವೇ ಮಹಾ ವೇದನೆಯಾಗಿತ್ತು - ಆತನ ಮೂಲಕವಾಗಿ, ನಮ್ಮೆಲ್ಲರ ಬಲಹೀನತೆಯನ್ನು ಹೋಲಿಕೆ ಮಾಡಬಹುದಾಗಿದೆ.

## ಭೂಕಂಪನ: ದೈವೀಕ ಶಕ್ತಿ (ಮತ್ತಾಯ 27:46, 50, 51ಬಿ, ಸಿ, 54; ಲೂಕ 23:46; ಯೋಹಾನ 19:28, 30)

ಮೂರು ತಾಸುಗಳ ಕತ್ತಲಿನ ನಂತರ, ಯೇಸು ಗಟ್ಟಿಯಾದ ಧ್ವನಿಯಿಂದ, "ನನ್ನ ದೇವರೇ ನನ್ನ ದೇವರೇ, ಏಕೆ ನನ್ನನ್ನು ಕೈ ಬಿಟ್ಟಿದೆ?" (ಮತ್ತಾಯ 27:46). ಬೇಗನೆ ಇನ್ನೂ ಮೂರು ಮಾತುಗಳು ಬಂದವು: "ನನಗೆ ನೀರಡಿಕೆಯಾಗಿದೆ" (ಯೋಹಾನ 19:28); "ತೀರಿತು!" (ಯೋಹಾನ 19:30); ಮತ್ತು "ತಂದೆಯೇ ನನ್ನ ಆತ್ಮವನ್ನು ನಿನ್ನ ಕೈಗೆ ಒಪ್ಪಿಸುತ್ತೇನೆ" (ಲೂಕ 23:46). ನಂತರ ಆತನು ಗಟ್ಟಿಯಾಗಿ ಕೂಗಿ "ಪ್ರಾಣ ಬಿಟ್ಟನು" (ಮತ್ತಾಯ 27:50). ತದನಂತರ ಆಶ್ಚರ್ಯಕರವಾದ ಅನೇಕ ಘಟನೆಗಳು ಜರುಗಿದವು.

**ನಡೆದ ಘಟನೆ ಏನು**

ಮೊದಲನೆಯದು ಭೂಕಂಪ (ನೋಡಿ ಮತ್ತಾಯ 27:54); ಭೂಮಿಯು ಅದುರಿತು (ಮತ್ತಾಯ 27:51ಬಿ). ಭೂಕಂಪದಂತೆಯೇ ಇತರೆ ಘಟನೆಗಳು ಉಂಟಾದವು, "ದೃಢವಾದ

ಭೂಮಿ ಕಂಪಿಸಿತು"[10] ಅಂದರೆ ಅದು ದೃಢತೆಯನ್ನು ಕಳಕೊಂಡಿತ್ತು. ರಿಕ್ಟರ್ ಮಾಪಕದಲ್ಲಿ ಅದರ ಅಳತೆ ಎಷ್ಟಿತ್ತೆಂದು ಅರಿಯೆನು,[11] ಅದು ಬಂಡೆಗಳನ್ನು ಒಡೆದು ಹಾಕುವ ಶಕ್ತಿಯನ್ನು ಹೊಂದಿತ್ತು (ಮತ್ತಾಯ 27:51ಸಿ) ಬಂಡೆಗಳಿಂದ ಭದ್ರಪಡಿಸಿದ್ದ ಸಮಾಧಿಗಳನ್ನು ಅದು ತೆರೆದು ಹಾಕಿತ್ತು (ಮತ್ತಾಯ 27:52ಎ).

ಭೂಮಿಯ ಅಂತರಾಳದಲ್ಲಿ ಒತ್ತಡ ಉಂಟಾಗಿ, ಜರುಗುವ ಭೂಕಂಪನವು ಇದಾಗಿರಲಿಲ್ಲ.[12] ಈ ಘಟನೆಗಳಲ್ಲಿ ದೇವರ ಸಮಯ ಹಾಗೂ ಆತನ ಕೈಗಳು ಒಳಗೊಂಡಿದ್ದವು. ಯೇಸುವಿನ ಮರಣದ ಜೊತೆಯಲ್ಲಿ (ಮತ್ತಾಯ 27:50, 51), ಭೂಕಂಪ ಹಾಗೂ ದೇವಾಲಯದ (ಮತ್ತಾಯ 27:51) ಹರಿದು ಹೋದ ತೆರೆಯು ಮತ್ತು ಸಮಾದಿಗಳು ತೆರೆಯಲ್ಪಟ್ಟವು (ಮತ್ತಾಯ 27:51, 52) ಒಳಗೊಂಡಿದ್ದವು. ಅದನ್ನು ಅನುಭವಿಸಿದವರು ಈ ಘಟನೆಗಳ ಮೂಲಕ ದೇವರ ಸದುದ್ದೇಶವನ್ನು ಅರಿತುಕೊಂಡರು (ಮತ್ತಾಯ 27:54).

#### ಅದರ ಅರ್ಥವೇನು

ಭೂಕಂಪದಲ್ಲಿ, ದೇವರ *ದೈವೀಕ ಶಕ್ತಿಯನ್ನು* ಕಾಣುತ್ತೇವೆ. ಸಿನಾಯಿ ಪರ್ವತದಲ್ಲಿ ಧರ್ಮಶಾಸ್ತ್ರವನ್ನು ಪಡೆದಾಗ, "ಬೆಟ್ಟವೆಲ್ಲ ಬಹಳವಾಗಿ ಕಂಪಿಸಿತು" (ವಿಮೋಚನಕಾಂಡ 19:18). ಯೇಸು ಧರ್ಮಶಾಸ್ತ್ರವನ್ನು ನೆರವೇರಿಸಿದಾಗ,[13] ಭೂಮಿಯು ಪುನಃ ಕಂಪಿಸಿತು. ಭೂಕಂಪವು ದೇವರ ಶಕ್ತಿಯನ್ನು ಪ್ರಚುರಪಡಿಸಿತು, ಅದಕ್ಕಿಂತಲೂ ಹೆಚ್ಚಾದ ಪ್ರಭಾವವನ್ನು ಕಾಣುತ್ತೇವೆ. ದೇವರ ಶಕ್ತಿಯು ಮನುಷ್ಯನ ಹೃದಯವನ್ನು ಸ್ಪರ್ಶಿಸಿತು ಎಂಬ ಸೂಚನೆಯನ್ನು ಕಾಣುತ್ತೇವೆ: "ಶತಾಧಿಪತಿಯು ಮತ್ತು ಅವನ ಸಂಗಡ ಯೇಸುವನ್ನು ಕಾಯುತ್ತಿದ್ದವರು ಭೂಕಂಪನವನ್ನೂ ನಡೆದ ಸಂಗತಿಗಳನ್ನೂ ನೋಡಿ ಬಹಳ ಹೆದರಿಕೊಂಡು ನಿಜವಾಗಿ ಈತನು ದೇವಕುಮಾರನಾಗಿದ್ದನ್ನು ಅಂದರು!" (ಮತ್ತಾಯ 27:54). ಕ್ರಿಸ್ತನ ಮರಣದಲ್ಲಿ, ಪಾಪವನ್ನು ನಾಶಮಾಡಿದ, ದೇವರ ಶಕ್ತಿಯ ಸಂಕೇತವಾಗಿದೆ.

## ತೆರೆಯು ಹರಿಯಿತು: ದೈವೀಕ ಉದ್ದೇಶ

## (ಮತ್ತಾಯ 27:50, 51ಎ; ಮಾರ್ಕ 15:37, 38; ಲೂಕ 23:45ಬಿ)

#### ಏನು ನಡೆಯಿತು

ಮೂರನೆಯ ಅದ್ಭುತವನ್ನು ಕಾಣಲು, ನಾವುಗಳು ಗೊಲ್ಗತದಿಂದ ದಕ್ಷಿಣದ ಪಟ್ಟಣದ ಬಾಗಿಲಿನ ಮೂಲಕ ದೇವಾಲಯದ ಸ್ಥಳಕ್ಕೆ ಹೋಗಬೇಕು. ಕ್ರಿಸ್ತನು ಗಟ್ಟಿಯಾಗಿ ಕೂಗಿದ ನಂತರ, ಆತನು ಇದ್ದ ಸ್ಥಳವು ಕಂಪಿಸಿದ ನಂತರ ದೂರದ ದೇವಾಲಯದೊಳಗೆ ಒಂದು ಘಟನೆಯು ನೆರವೇರಿತು: "... ಇಗೋ, ದೇವಾಲಯದ ತೆರೆಯು ಮೇಲಿನಿಂದ ಕೆಳಗಿನವರೆಗೂ ಹರಿದು ಹೋಯಿತು" (ಮತ್ತಾಯ 27:51; ನೋಡಿ ಮಾರ್ಕ 15:38; ಲೂಕ 23:45ಬಿ[14]).

ಈ ಘಟನೆ ನೆರವೇರಿಕೆಯ ಹಿನ್ನಲೆಯನ್ನು ಗಮನಿಸಬೇಕು. ಸಾಯಂಕಾಲದ ಪ್ರಾರ್ಥನೆಯ ಸಮಯದಲ್ಲಿ ಯೇಸು ಸತ್ತನು: 9ನೇ ತಾಸು ಅಂದರೆ ಮಧ್ಯಾಹ್ನ 3 ಗಂಟೆ (ಮತ್ತಾಯ 27:46; ನೋಡಿ ಅಪೊಸ್ತಲರ ಕೃತ್ಯಗಳು 3:1). ಆ ಸಮಯದಲ್ಲಿ, ಜನರು ಮಹಿಳೆಯರು ಕೂಡಿಬರುವ ಸ್ಥಳದಲ್ಲಿ ಪ್ರಾರ್ಥನೆಗಾಗಿ ಸೇರುತ್ತಿದ್ದರು. ಅವರು ಪ್ರಾರ್ಥಿಸುವಾಗ ಯಾಜಕನು ದೂಪ ಹಾಕಲು ದೇವಾಲಯದೊಳಗೆ ಹೋಗುತ್ತಿದ್ದನು.

ಆ ದಿನದಲ್ಲಿ ದೇವಾಲಯದ ಪರಿಶುದ್ಧ ಸ್ಥಳದಲ್ಲಿ ದೂಪ ಹಾಕುವ ಯಾಜಕನು ನೀನೇ ಆಗಿರುವಿಯೆಂದು ಭಾವಿಸಿಕೊಳ್ಳಿ. ಅಂದರೆ ಜೀವಮಾನಕಾಲದ ಒಂದೇ ಅವಕಾಶವಾಗಿರುತ್ತದೆ. ನಿಮ್ಮ ನಾಡಿ ಮಿಡಿತ ಅಧಿಕಗೊಳ್ಳುತ್ತದೆ. ನಿನ್ನ ಮುಂದೆ ದೂಪವೇದಿ, ಅದರ ಹಿಂದೆ ತೆರೆ ಹಾಗೂ ಅತಿಪರಿಶುದ್ಧ ಸ್ಥಳವಿದೆ. ಹೆಸರಿಗೆ ತಕ್ಕಂತೆ ಅತಿ ಪರಿಶುದ್ಧ ಸ್ಥಳವು,

ಭೂಲೋಕದಲ್ಲಿ ಅತಿ ಪ್ರಮುಖವಾದ ಸ್ಥಳವಾಗಿದೆ. (ಮಹಾಯಾಜಕನು ಮಾತ್ರ ಆ ಸ್ಥಳಕ್ಕೆ ಪ್ರವೇಶವನ್ನು ಪಡೆದು, ಒಡಂಬಡಿಕೆಯ ಹಬ್ಬದ ದಿನದಂದು ಮಾತ್ರ ಅಲ್ಲಿ ಪ್ರವೇಶಿಸಬೇಕಿತ್ತು; ನೋಡಿರಿ ಇಬ್ರಿಯ 9:7; ವಿಮೋಚನಕಾಂಡ 30:10; ಯಾಜಕಕಾಂಡ 16:29-34.)

ನೀವೆ ಬಂಗಾರದ ಯಜ್ಞವೇದಿಯನ್ನು ಹಾದುಹೋಗುವಾಗ, ನಿಮ್ಮ ಮುಂದೆ 30/30 ಅಡಿ (9 ಮೀಟರ್ 9 ಮೀಟರ್) ಭಾರವಾದ ಒಂದು ತೆರೆಯನ್ನು[16] ಕಾಣುವಿರಿ. ಇಂಥಹ ತೆರೆಯನ್ನು ಮಾಡಬೇಕೆಂದು ಮೋಶೆಯ ಆದೇಶವನ್ನು ನೀಡಿದ್ದನು:

> ಹುರಿನಾರಿನ ಬಟ್ಟೆಯಲ್ಲಿ ನೀಲಿ ಧೂಮ್ರ ರಕ್ತವರ್ಣಗಳುಳ್ಳ ದಾರದಿಂದ ಕೆರೂಬಿಗಳನ್ನು ಚಮತ್ಕಾರವಾಗಿ ಕಸೂತಿಹಾಕಿ ಒಂದು ತೆರೆಯನ್ನು ಮಾಡಿಸಬೇಕು. ಜಾಲೀಮರದಿಂದ ನಾಲ್ಕು ಕಂಬಗಳನ್ನು ಮಾಡಿಸಿ ಚಿನ್ನದ ತಗಡುಗಳನ್ನು ಹೊದಿಸಿ ನಾಲ್ಕು ಬೆಳ್ಳಿಯ ಗದ್ದಿಗೇಕಲ್ಲುಗಳ ಮೇಲೆ ನಿಲ್ಲಿಸಿ ಚಿನ್ನದ ಕೊಂಡಿಗಳಿಂದ ಆ ತೆರೆಯನ್ನು ಆ ನಾಲ್ಕು ಕಂಬಗಳಿಗೆ ಸಿಕ್ಕಿಸಬೇಕು. ಆ ತೆರೆಯನ್ನು ಕೊಂಡಿಗಳಿಗೆ ಸಿಕ್ಕಿಸಿದಾಗ ಅದರೊಳಗೆ ಆಜ್ಞಾಶಾಸನಗಳ ಮಂಜೂಷವನ್ನು ತರಿಸಿಡಬೇಕು. ಆ ತೆರೆಯು ಪವಿತ್ರಸ್ಥಾನವೆಂಬದನ್ನೂ ಮಹಾಪವಿತ್ರಸ್ಥಾನವೆಂಬದನ್ನೂ ಬೇರೆ ಬೇರೆ ಮಾಡುವದು (ವಿಮೋಚನಕಾಂಡ 26:31-33).

ಸೊಲೊಮೋನನ್ನು ಕಟ್ಟಿದ ದೇವಾಲಯದಲ್ಲಿ, ಸೊಲೋಮೋನನು ಪರದೆಯನ್ನು ನೀಲ ದೂಮ್ರ ರಕ್ತವರ್ಣಗಳುಳ್ಳ ನಾರಿನಿಂದ ಮಾಡಿಸಿ, "ಅದರಲ್ಲಿ ಕೆರೂಬಿಗಳನ್ನು ಕಸೂತಿ ಹಾಕಿಸಿದನು" (2 ಪೂರ್ವಕಾಲವೃತ್ತಾಂತ 3:14). ಹೆರೋದನು ಸಹ ಇದೇ ವಿಧವಾದ ತೆರೆಗಳನ್ನು ತನ್ನ ಆಲಯದಲ್ಲಿ[17] ಮಾಡಿಸಿದ್ದನು. ಮಹಾಯಾಜಕನ ದೃಷ್ಟಿಕೋನದಲ್ಲಿದ ತೆರೆಯ ವಿಚಾರವನ್ನು ನಿಕೋಲೋಸ್‌ರವರು ವಿವರಿಸಿ:

> ಅದು ಉತ್ತಮವಾದ ಬಟ್ಟೆಯಾಗಿತ್ತು ಅದು ನೀಲಿಧೂಮ್ರ ರಕ್ತವರ್ಣಗಳೆಂಬ ಮೂರು ಬಣ್ಣಗಳನ್ನು ಹೊಂದಿದ್ದು ... ಅದರಲ್ಲಿ ಕೆರೋಬಿಗಳನ್ನು ಕೆತ್ತಲಾಗಿತ್ತು - ಅದರಲ್ಲಿ ಜೀವ ಮತ್ತು ಶಕ್ತಿಯ ಸೂಚನೆಯಿತ್ತು ಮತ್ತು ಸೌಂದರ್ಯ ಹಾಗೂ ಮಹಿಮೆಯ ಪ್ರದರ್ಶನವನ್ನು ಹೊಂದಿತ್ತು ...
>
> ಬಂಗಾರದ ದೀಪ ಸ್ತಂಭದ ... ಮುಂದೆ ಅದು ಆಕರ್ಷಣಿಯವಾಗಿತ್ತು![18] ಅದರ ಹಿಂದಿನ ಮಹಾ ಮಹಿಮೆಯ ಸ್ಥಳದ ಮುಂದೆ ಅದು ಎಷ್ಟು ರಮಣೀಯವಾಗಿರಬಹುದು ಇಷ್ಟೊಂದು ಎಚ್ಚರವಹಿಸಿ ನಿರ್ಮಿಸಲಾದ ಆ ಸ್ಥಳದ ಮುಂದೆ, "ಇಲ್ಲಿಯವರೆಗೂ ಬರಬಹುದೇ ಹೊರತು, ಇಲ್ಲಿಂದ ಮುಂದೆ ಪ್ರವೇಶವಿಲ್ಲ" ಎಂಬ ಪ್ರಕಟಣೆಯನ್ನು ಊಹಿಸಿಕೊಳ್ಳಿರಿ.[19]

ನೀನು ನಿನ್ನ ಕಣ್ಣುಗಳನ್ನು ತೆರೆಯ ಕಡೆಯಿಂದ ವಾಲಿಸಿ, ಈಗ ನಿನ್ನ ಮುಂದಿನ ಕರ್ತವ್ಯದ ಕಡೆಗೆ ಗಮನವಿಟ್ಟಿರುವಿ. ದೂಪವೇದಿಯ ಮೇಲೆ ನೀನು ದೂಪವನ್ನು ಹಾಕುವಾಗ, ನಿನ್ನ ಪಾದಗಳ ಕೆಳಗೆ ಇರುವ ಭೂಮಿಯು ಅದುರಿ ನಿನ್ನ ಮೊಣಕಾಲುಗಳು ಬಾಗುತ್ತವೆ.[20] ಈಗ ಒಂದು ಆಶ್ಚರ್ಯವನ್ನು ನೋಡುತ್ತಿ; ಹರಿದು ಹೋಗುತ್ತಿರುವ ಶಬ್ದವನ್ನು ಕೇಳುತ್ತಿ, ಇಪ್ಪತ್ತು ಅಡಿ ಎತ್ತರದಲ್ಲಿ ತೆರೆಯು ನಿಧಾನವಾಗಿ ಹರಿಯತೊಡಗಿದೆ. ನೀನು ಅದನ್ನು ಗಾಬರಿಯಿಂದ ನೋಡುವಾಗ ತೆರೆಯು ಮೇಲಿನಿಂದ ಕೆಳಗಿನವರೆಗೂ ಹರಿದು, ಎರಡು ಭಾಗವಾಗುತ್ತದೆ. ನಂತರ ನಿನಗೆ ಅತಿ ಪರಿಶುದ್ಧ ಸ್ಥಳದಲ್ಲಿರುವ ಮಹಿಮೆಯು ಗೋಚರವಾಗುತ್ತದೆ! ಈ ಘಟನೆಯನ್ನು ನೀನು ಎಂದಿಗೂ ಮರೆಯಲಾರೆ, ಅದನ್ನು ನೀನು ನಿನ್ನ ಮೊಮ್ಮಕ್ಕಳಿಗೂ ತಿಳಿಸುತ್ತಿರುವಿ!

ಟೀಕಕಾರರು ಈ ಆಶ್ಚರ್ಯವನ್ನು ವಿರುದ್ಧ ದಿಕ್ಕಿನಲ್ಲಿ ವಿವರಿಸಿರುವರು. "ಭೂಮಿಯು ಅದುರಿದ ನಿಮಿತ್ತವಾಗಿ, ತೆರೆಯು ಎರಡು ಭಾಗವಾಯಿತು." ಆದರೆ ಅವರು ನೀಡುವ ವಿವರಣೆ

ಪೂರ್ಣವಲ್ಲ. ಉದಾಹರಣೆಗೆ, ಭೂಕಂಪವು ತೆರೆಯ ಮೇಲೆ ಪರಿಣಾಮ ಬೀರುವದಾದರೆ, ದೇವಾಲಯದ ಮೇಲೆ ಏಕೆ ಪರಿಣಾಮ ಬೀರಲಿಲ್ಲ? ಭೂಕಂಪವು ಗಟ್ಟಿಯಾದ ವಸ್ತುಗಳನ್ನೆ ಅದುರಿಸುವಾಗ, ಮೃದುವಾದ ತೆರೆಯ ಮೇಲೆ ಹೆಚ್ಚು ಪರಿಣಾಮ ಬೀರುವದಿಲ್ಲ. "ಹಾ," ವಿಶ್ವಾಸಿಗಳು, "ಈ ರೀತಿಯಾಗಿ ಹೇಳಬಹುದು; ಆ ತೆರೆಯು ಪ್ರಾಯಶಃ ಹಳೆಯದಾಗಿತ್ತು" ಮತ್ತು ಅದು ಮೆದುವಾಗಿದ್ದು ಬಿದ್ದುಹೋಗುವ ಪರಿಸ್ಥಿತಿಯಲ್ಲಿತ್ತು. ಆದರೆ, ಅದು ಹೀಗೆ "ಎರಡು ಭಾಗವಾಯಿತು" (ಲೂಕ 23:45). ಇಲ್ಲಿ ತೆರೆಯ ಸಹಜ ಕ್ರಿಯೆಗಳಿಂದ ಹರಿದು ಹೋಗಲಿಲ್ಲ.

ಮನುಷ್ಯರ ಕುಯುಕ್ತಿಯಿಂದಲೂ ಅದು ಹರಿದುಹೋಗಲಿಲ್ಲ. (ಊಹಿಸಲಾರದ ಕಾರಣ) ಒಂದು ವೇಳೆ ಮನುಷ್ಯರು ಪ್ರಯತ್ನಿಸಿದ್ದರೆ, ಇಬ್ಬರು ಅದನ್ನು ಕೆಳಭಾಗದಿಂದ ಹಿಡಿದು ಹರಿಯಬೇಕಿತ್ತು. ಆಗ ಅದು *ಕೆಳಗಿನಿಂದ ಮೇಲಿನವರೆಗೂ* ಹರಿಯುತ್ತಿತ್ತು. ಆದರೆ ವಾಕ್ಯಭಾಗವು ಅದನ್ನು: "ದೇವಾಲಯದ ತೆರೆಯು *ಮೇಲಿನಿಂದ ಕೆಳಗಿನವರೆಗೂ* ಹರಿದು ಹೋಯಿತು" ಎಂದು ತಿಳಿಸುತ್ತದೆ (ಮತ್ತಾಯ 27:51ಎ; ಒತ್ತಿ ಹೇಳಿದ್ದು ನನ್ನದು). ಆದರೆ ಅದು ಅಲೌಕಿಕವಾದ ಕೈಗಳಿಂದ ಅಂದರೆ ದೇವರು ತಾನೇ ಹರಿದು ಹಾಕಿದನು.[21]

**ಅದರ ಗೂಢಾರ್ಥವೇನು**

ಘಟನೆಯಿಂದ, ನಾವುಗಳು ಯಾವ ಪಾಠವನ್ನು ಕಲಿಯಬಹುದು? ಹರಿದು ಹೋದ ತೆರೆಯ ಘಟನೆಯು, ಶಿಲುಬೆಯ *ದೈವೀಕ ಉದ್ದೇಶಕ್ಕೆ* ಸಂಬಂಧಿಸಿರುತ್ತದೆ. ಇದರಲ್ಲಿ ಮೂರು ಅಂಶಗಳನ್ನು ಗಮನಿಸುತ್ತೇವೆ:

(1) ತೆರೆಯ ನಾಶನವು (ಹಳೆಯ ಒಡಂಬಡಿಕೆಯ) ಹಳೆಯ ಒಪ್ಪಂದದ ಅಂತಿಮ ಕ್ರಮವಾಗಿದೆ.[22] ಅದು ಕ್ರಿಸ್ತನ ಮರಣಕ್ಕೆ ಸಂಬಂಧಪಟ್ಟಿದೆ, ಅದು ಹೊಸ ಒಡಂಬಡಿಕೆಯ ಆರಂಭವಾಗಿದೆ (ಒಡಂಬಡಿಕೆ) ಇಬ್ರಿಯ ಬರಹಗಾರನು ಬರೆದು, "ಮರಣಶಾಸನವು ಇರುವಲ್ಲಿ ಅದನ್ನು ಬರೆಯಿಸಿದವನ ಮರಣವು ಪ್ರಸಿದ್ಧವಾಗಿರಬೇಕಷ್ಟೆ. ಮರಣಶಾಸನವು ಮರಣವಾದ ಮೇಲೆ ನಡೆಯುವದೇ ಹೊರತು ಬರೆಯಿಸಿದನು ಜೀವದಿಂದಿರುವಾಗ ಎಂದಿಗೂ ಸಲ್ಲುವದಿಲ್ಲ" (ಇಬ್ರಿಯ 9:16, 17). ಆದ್ದರಿಂದ ಯೇಸುವಿನ ಮರಣದಲ್ಲಿ ಹಳೆಯದು ಇಲ್ಲದಾಗಿ ಹೊಸದು ಆರಂಭವಾಗಿದೆ.

(2) ಹರಿದು ಹೋದ ತೆರೆಯು ಅತಿಪರಿಶುದ್ಧ ಸ್ಥಳಕ್ಕೆ ಹಾದಿಯನ್ನು ಸುಗಮಮಾಡಿದಂತೆ, ಯೇಸುವಿನ ಹರಿದು ಹೋದ ದೇಹದ ಮೂಲಕ ಪರಲೋಕದಲ್ಲಿನ ಅತಿ ಪರಿಶುದ್ಧ ಸ್ಥಳದ ಹಾದಿ ಸುಗಮವಾಯಿತು. ದೈವೀಕ ತೆರೆಯ ಹಾಗೂ ಯೇಸುವಿನ ದೇಹದ ನಡುವಿನ ಹಾದಿಯೂ ಸುಗಮವಾಯಿತು. ಇಬ್ರಿಯಾ ಬರಹಗಾರನು ಹೀಗೆ ಬರೆದಿದ್ದಾರೆ, "ಹೀಗಿರುವಲ್ಲಿ, ... ಸಹೋದರರೇ, ಯೇಸು ನಮಗೋಸ್ಕರ ಪ್ರತಿಷ್ಠಿಸಿದ ಜೀವವುಳ್ಳ ಹೊಸ ದಾರಿಯಲ್ಲಿ ಆತನ ರಕ್ತದ ಮೂಲಕ ಆತನ ಶರೀರವೆಂಬ ತೆರೆಯ ಮುಖಾಂತರ ದೇವರ ಸಮಕ್ಷಮದಲ್ಲಿ ಪ್ರವೇಶಿಸುವದಕ್ಕೆ ನಮಗೆ ಧೈರ್ಯವುಂಟಾಯಿತು" (ಇಬ್ರಿಯ 10:19, 20).

(3) ಹರಿದು ಹೋದ ತೆರೆಯು ಘಟನೆಯಿಂದ, ಒಂದು ವಿಶೇಷ ಪಾಠವನ್ನು ಕಲಿಯಬಹುದಾಗಿದೆ. ಯೇಸುವಿನ ಮರಣದ ಮೂಲಕ ಜನರಿಗೆ ದೇವರ ಸಮೀಪಕ್ಕೆ ಹೋಗುವ ಪ್ರವೇಶ ಉಂಟಾಯಿತು. ಈ ಹಿಂದೆ ದೇವಾಲಯದ ಅತಿಪರಿಶುದ್ಧ ಸ್ಥಾನದೊಳಗೆ, ಮಹಾಯಾಜಕನು ಮಾತ್ರ ಹೋಗುವದಕ್ಕೆ ಆಸ್ಪದವಿತ್ತು. ತೆರೆಯು ತೆಗೆಯಲ್ಪಟ್ಟಾಗ, ಇತರರೂ ಸಹ ಆ ದರ್ಶನವನ್ನು ನೋಡಿ, ಒಂದು ವೇಳೆ ಅದರೊಳಗೆ ಹೋಗುವ ಸಾಧ್ಯತೆಯು ಉಂಟಾಗಿರಬಹುದು. ಮೇಲಿನ ವಾಕ್ಯದಲ್ಲಿ ದೇವರ ಮತ್ತು ಮನುಷ್ಯರ ನಡುವಿನ ಆಡಚಣೆಯು ನಿವಾರಣೆಯಾಯಿತು ಎಂದು ಬರಹಗಾರನು ತಿಳಿಸಿರುವನು. "ದೇವರ ಸಮಕ್ಷಮದಲ್ಲಿ ಪ್ರವೇಶಿಸುವದಕ್ಕೆ ನಮಗೆ ಧೈರ್ಯವುಂಟಾಯಿತು. ಹೀಗಿರುವಲ್ಲಿ ಯೇಸು ನಮಗೋಸ್ಕರ

ಪ್ರತಿರೋಧ ಜೀವವುಳ್ಳ ಹೊಸ ದಾರಿಯಲ್ಲಿ ಆತನ ರಕ್ತದ ಮೂಲಕ, ಆತನ ಶರೀರವೆಂಬ ತೆರೆಯ ಮುಖಾಂತರ ಪ್ರವೇಶಿಸುವದಕ್ಕೆ ಧೈರ್ಯವುಂಟಾಯಿತು." ಮುಂದಿನ ವಚನದಲ್ಲಿ: "ದೇವರ ಮನೆಯ ಮೇಲೆ ಅಧಿಕಾರಿಯಾಗಿರುವ ಶ್ರೇಷ್ಟನಾದ ಯಾಜಕನು ನಮಗಿದ್ದಾನೆ, ಆದ್ದರಿಂದ ಪೂರ್ಣ ನಂಬಿಕೆಯುಳ್ಳವರಾಗಿಯೂ, ಯಥಾರ್ಥ ಹೃದಯವುಳ್ಳವರಾಗಿಯೂ ದೇವರ ಬಳಿಗೆ ಬರೋಣ" (ಇಬ್ರಿಯ 10:21, 22ಎ).

ಮನುಷ್ಯರ ಮತ್ತು ದೇವರ ನಡುವಿನ ಅಡಚಣೆಯ ನಿವಾರಣೆ ಮಾತ್ರವಲ್ಲದೆ, "ವಿಶೇಷ ಯಾಜಕ" ಮತ್ತು "ಸಾಮಾನ್ಯ ಜನರ" ನಡುವಿನ ಸಂಬಂಧವು ಸಹ ಸರಾಗವಾಯಿತು (ನೋಡಿ 1 ಪೇತ್ರ 2:5, 9). ಜನರ ನಡುವಿನ ಅಡಚಣೆಗಳು ಸಹ ನಿರ್ಮೂಲಗೊಂಡವು (ಎಫೆಸ 2:14-16). ಆ "ತೆರೆ"ಯನ್ನು ಪುನಃ ಸ್ವಸ್ಥಾನಕ್ಕೆ ಸೇರಿಸದೆ ಇರೋಣ![23]

## ಸತ್ತವರು ಎದ್ದು ಬಂದರು: ಒಂದು ದೈವೀಕ ವಾಗ್ದಾನ (ಮತ್ತಾಯ 27:51ಬಿ-53)

### ನಡೆದ ಘಟನೆ ಏನು

ಸತ್ಯವೇದದಲ್ಲಿನ ಒಂದು ವಿಶೇಷವಾದ ಅದ್ಭುತದ ಬಳಿಗೆ ನಾವು ಈಗ ಬಂದಿದ್ದೇವೆ. ಆದರೆ ಅಲ್ಪ ಪದಗಳನ್ನು ಮಾತ್ರ ಬಳಸಲಾಗಿದೆ. ಮತ್ತಾಯ 27ರಲ್ಲಿ ಭೂಕಂಪನದಿಂದ, ಬಂಡೆಗಳು ಸೀಳಿದವು ಸತ್ತು ಹೋಗಿದ್ದ ಭಕ್ತರು ಎದ್ದು ಬಂದರು, "ಮತ್ತು ಆತನು ಎದ್ದ ಮೇಲೆ ಸಮಾಧಿಗಳೊಳಗಿಂದ ಹೊರಗೆ ಬಂದು ಪರಿಶುದ್ಧ ಪಟ್ಟಣದೊಳಗೆ ಹೋಗಿ ಅನೇಕರಿಗೆ ಕಾಣಿಸಿಕೊಂಡರು" (ವಚನಗಳು 51ಬಿ-53). ಈ ಎರಡು ಅದ್ಭುತಗಳ ಕುರಿತು ನೋಡೋಣ: (1) ಸಮಾಧಿಗಳು ತೆರೆದವು, (2) ಸತ್ತವರು ಎದ್ದು ಬಂದರು. ಸತ್ತವರು ಶುಕ್ರವಾರ ಸಂಜೆ ಎದ್ದಿರಬಹುದು (ಭೂಮಿಯ ಅದುರಿದಾಗ), ಆದರೆ ಭಕ್ತರು ಭಾನುವಾರದವರೆಗೂ ಎದ್ದಿರಲಿಲ್ಲ (ಯೇಸು ಎದ್ದ ಸಮಯದಲ್ಲಿ ಎದ್ದಿರಬಹುದು). ಹೇಗೂ, ಮತ್ತಾಯನು ಈ ಎರಡನ್ನೂ ಕೂಡಿಸಿ ಹೇಳಿರುವದರಿಂದ, ನಾವುಗಳು ಅದನ್ನೆ ಪಾಲಿಸೋಣ.

ಅದರ ಕುರಿತು ಆಳವಾಗಿ ನೋಡೋಣ: ಭೂಕಂಪದ ನಿಮಿತ್ತ ಬಂಡೆಗಳು ಸೀಳಿದಾಗ, ಗೊಲ್ಗಥದ ಬಳಿಯಿಂದ ಬಂಡೆಗಳ ಸಮಾದಿಗಳು ಸಹ ತೆರೆದುಕೊಂಡವು.[24] ಇದರ ಪರಿಣಾಮದಿಂದ, ಇನ್ನೂ ಕೆಲವರು ನಂತರದಲ್ಲಿ ಎದ್ದು ಬಂದರು, ಇದರಲ್ಲಿ ಭಕ್ತರು ಮಾತ್ರ ಒಳಗೊಂಡಿದ್ದರು. ಒಂದು ವೇಳೆ ಅವರು ಹಳೆ ಒಡಂಬಡಿಕೆಯ ಕಾಲದ ಭಕ್ತರಾಗಿರಬಹುದು (ನೋಡಿ ಕೀರ್ತನೆ 34:9)[25] - ಅವರುಗಳು ಧರ್ಮಶಾಸ್ತ್ರದ ಪ್ರಕಾರ ಬದುಕಿ ಸತ್ತವರು, ಅವರು ದೇವರಿಗೆ ನಂಬಿಗಸ್ತರಾಗಿದ್ದರು.

ಭೂಕಂಪದ ನಿಮಿತ್ತ ತೆರೆದುಕೊಂಡ ಸಮಾಧಿಗಳಲ್ಲಿದ್ದ ಭಕ್ತರ ದೇಹಗಳು ಗೋಚರಗೊಂಡವು. ಅದನ್ನು ಮುಟ್ಟಿದ ಜನರು ಅಪವಿತ್ರರಾಗಿದ್ದರು (ಅರಣ್ಯಕಾಂಡ 19:11). ಅಂಥವರು ಸಬ್ಬತ್ ದಿನದಲ್ಲಿ ವಿಶೇಷ ಊಟವನ್ನು ಮಾಡುವಂತಿರಲಿಲ್ಲ. ಅವರು ಸಬ್ಬತ್‌ದಿನದಲ್ಲಿ ಕೆಲಸವನ್ನು ಮಾಡುವ ಹಾಗಿರಲಿಲ್ಲ (ವಿಮೋಚನಕಾಂಡ 20:8-11). ಶನಿವಾರ ಹಾಗು ಶುಕ್ರವಾರ ನಡೆದ ಘಟನೆಗೆ ಸಾಕ್ಷಿಯಾಗಿ, ಸತ್ತವರ ಹೆಣಗಳು ಅಲ್ಲಿದ್ದವು ಒಂದು ವೇಳೆ ಭಾನುವಾರದ ಕೆಲ ಹೊತ್ತು ಇರಬಹುದು.

ಕ್ರಿಸ್ತನ ಪುನರುತ್ಥಾನದ ನಂತರ, ದೇವರು ಇವರನ್ನು ಎಬ್ಬಿಸಿರಬಹುದು ಮತ್ತು ಆತನು ಎದ್ದ ಮೇಲೆ ಸಮಾಧಿಗಳೊಳಗಿಂದ ಹೊರಗೆ ಬಂದು ಪರಿಶುದ್ಧ ಪಟ್ಟಣದೊಳಗೆ ಹೋಗಿ ಅನೇಕರಿಗೆ ಕಾಣಿಸಿಕೊಂಡರು (ಮತ್ತಾಯ 27:53). ಈ ಘಟನೆಯ ಬಗ್ಗೆ ಹೆಚ್ಚು ಮಾಹಿತಿ ಇರುವದಿಲ್ಲ. ಎದ್ದವರ ಬಗ್ಗೆಯೂ ಮಾಹಿತಿ ಇರುವದಿಲ್ಲ ಒಂದು ವೇಳೆ ಅವರುಗಳು ಯೆರೂಸಲೇಮಿನವರಿಗೆ ಪರಿಚಿತರಿರಬಹುದು.[26] ಅವರು ಯಾರಿಗೆ ಕಾಣಿಸಿಕೊಂಡರು

ಎಂದು ತಿಳಿಯದಿದ್ದರೂ, ಯೆರೂಸಲೇಮಿಗೆ ಹೋಗುವ ಸಾಧ್ಯತೆಯಿತು. ಆ ಪುನರುತ್ಥಾನದ ಸ್ವರೂಪವನ್ನು ಸಹ ಅರಿಯವು. ಹಳೆ ಒಡಂಬಡಿಕೆಯ ಹಾಗೂ ಕ್ರಿಸ್ತನ ಕಾಲದಲ್ಲಿ ಪುನರುತ್ಥಾನ ಹೊಂದಿದವರು ಪುನಃ ಸತ್ತುಹೋದರು.[27]

ಅನೇಕ ಸಂಗತಿಗಳನ್ನು ಈ ಜೀವಿತದಲ್ಲಿ ನಾವುಗಳು ಅರಿಯುವದಾದರೂ, ಆ ಸಂಧರ್ಭವು ಎಷ್ಟು ಮನೋಹರವಾಗಿರಬಹುದು[28] - ಆದರೆ ಎದ್ದು ಬಂದವರು ಬೆರಳೆಣಿಕೆ ಯಷ್ಟಿದ್ದರೂ, “ಅಲ್ಲಿ ... ಅನೇಕ ಭಕ್ತರು ... ಎದ್ದು ಬಂದಿದ್ದರು”! ಆಶ್ಚರ್ಯವಲ್ಲವೇ!

**ಅದರ ಅರ್ಥವೇನು**

ಪ್ರತಿ ವಿವರಣೆಗಳನ್ನು ನಾವುಗಳು ಅರಿಯದವರಾಗಿದ್ದರೂ, ಯೇಸುವಿನ ಪುನರುತ್ಥಾನದ ನಂತರ ಈ ಭಕ್ತರು ಎದ್ದು ಬಂದರು, ಎಂಬ ಇವೆರಡನ್ನು ನಾವುಗಳು ಹೋಲಿಸಬೇಕು. ಈತನ ಪುನರುತ್ಥಾನದಿಂದ, ಅವೆರಡು ಸಾಧ್ಯವಾಯಿತು. ಪೌಲನು ಬರೆದು, “ಆದರೆ ಕ್ರಿಸ್ತನು ಸತ್ತವರೊಳಗಿಂದ ಎದ್ದು ಬಂದೇ ಇದ್ದಾನೆ; ನಿದ್ರೆಹೋದವರಲ್ಲಿ ಪ್ರಥಮಫಲವಾದನು”[29] (1 ಕೊರಿಂಥ 15:20). ಆದ್ದರಿಂದ ಈ ಅದ್ಭುತದಲ್ಲಿ *ದೈವೀಕ ವಾಗ್ದಾನವು* ಅಡಗಿದೆ: ಮಗನನ್ನು ನೋಡಿ ಆತನು ನಂಬುವ “ದೈವತ್ವವು” ಪ್ರತಿಯೊಬ್ಬನಿಗೆ ನಿತ್ಯಜೀವವು ಸಿಕ್ಕಬೇಕೆಂಬದೇ ನನ್ನ ತಂದೆಯ ಚಿತ್ತವಾಗಿದೆ; ಮತ್ತು ನಾನು “ಕಡೇ ದಿನದಲ್ಲಿ” ಅವನನ್ನು ಎಬ್ಬಿಸುವೆನು ಎಂದು ಹೇಳಿದನು (ಯೋಹಾನ 6:40)! ಹೀಗೆ ಪೌಲನು ಬರೆದನು,

> ... ನಾವೆಲ್ಲರೂ ನಿದ್ರೆ ಹೋಗುವದಿಲ್ಲ; ಆದರೆ ಕಡೇ ತುತೂರಿಯ ಧ್ವನಿಯಾಗುವಾಗ ನಾವೆಲ್ಲರು ಒಂದು ಕ್ಷಣದಲ್ಲೇ ರೆಪ್ಪೆ ಬಡಿಯುವಷ್ಟರೊಳಗಾಗಿ ಮಾರ್ಪಡುವೆವು. ತುತೂರಿಯು ಊದಲಾಗಿ ಸತ್ತವರು ನಿರ್ಲಯರಾಗಿ ಎಬ್ಬಿಸಲ್ಪಡುವರು, ನಾವು ಮಾರ್ಪಡುವೆವು. ಲಯವಾಗುವ ಈ ದೇಹವು ನಿರ್ಲಯತ್ವವನ್ನು ಧರಿಸಿಕೊಳ್ಳುವದೂ ಮರಣಾಧೀನವಾಗಿರುವ ಈ ದೇಹವು ಅಮತ್ವವನ್ನು ಧರಿಸಿ ಕೊಳ್ಳುವದು ಅವಶ್ಯ. ಲಯವಾಗುವ ಈ ದೇಹವು ನಿರ್ಲಯತ್ವವನ್ನು ಧರಿಸಿಕೊಂಡಾಗ ಮರಣಾಧೀನವಾಗಿರುವ ಈ ದೇಹವು ಅಮರತ್ವವನ್ನು ಧರಿಸಿಕೊಂಡಾಗ ಬರೆದಿರುವ ಮಾತು ನೆರವೇರುವದು. ಆ ಮಾತು ಏನೆಂದರೆ-ಮರಣವು ನುಂಗಿಯೇ ಹೋಯಿತು, ಜಯವಾಯಿತು ಎಂಬುದೇ. ... ಆದರೆ ದೇವರು ನಮ್ಮ ಕರ್ತನಾದ ಯೇಸು ಕ್ರಿಸ್ತನ ಮೂಲಕ ನಮಗೆ ಜಯವನ್ನು ಕೊಟ್ಟಿದ್ದಾನೆ; ಆತನಿಗೆ ಸ್ತೋತ್ರ (1 ಕೊರಿಂಥ 15:51-57).

ಎಂಥಹ ವಿಶೇಷ ವಾಗ್ದಾನ!

## ಮುಕ್ತಾಯ

ಶಿಲುಬೆಯನ್ನು ನೀನು ಗಮನಿಸುವಾಗ, ನಿನ್ನ ಹೃದಯವು ಸ್ಪರ್ಷಗೊಳ್ಳುವದಿಲ್ಲವೇ? ಆಕಾಶಕ್ಕೆ ಸ್ಪರ್ಷವಾಗಲು; ಯಾಕಂದರೆ ಅದು ಕತ್ತಲಾಯಿತು. ಬಂಡೆಗಳಿಗೆ ಸ್ಪರ್ಷವಾಗಲು; ಅವುಗಳು ಸೀಳಿಹೋದವು. ತೆರೆಗೆ ಸ್ಪರ್ಷವಾಗಲು ಅದು ಮೈಲಿನಿಂದ ಹರಿದು ಹೋಯಿತು, ಹಳೆಯ ಭಕ್ತರ ಸಮಾಧಿಗಳಿಗೆ ಸ್ಪರ್ಷವಾಗಲು ಅವುಗಳು ತೆರೆದುಕೊಂಡವು. ಭಕ್ತರಿಗೆ ಸ್ಪರ್ಷವಾಗಲು, ಅವರು ಎದ್ದು ಬಂದರು, ಶಿಲುಬೆಯ ಸುತ್ತಮುತ್ತಲಿದ್ದ ಕಠಿಣವಾದ ಜನರು ಸ್ಪರ್ಷಕ್ಕೊಳಗಾದರು. ಅಥವಾ ಸಂಗತಿಗಳನ್ನು ಕಂಡವರು, “ಈತನು ದೇವ ಕುಮಾರನೇ ಅಂದರು!” (ಮತ್ತಾಯ 27:54; ಮಾರ್ಕ 15:39; ಲೂಕ 23:47, 48). *ನಿನ್ನ* ಕುರಿತಾಗಿ ಏನು? ಈ ಪ್ರಸಂಗದಿಂದ *ನಿನ್ನ* ಹೃದಯ ಸ್ಪರ್ಷಗೊಂಡಿದ್ದರೆ, *ಈ ದಿನವೇ* ಪ್ರತಿಕ್ರಿಯಿಸು.[30]


ಟಿಪ್ಪಣಿಗಳು

[1]ಈ ಸಂದೇಶಕ್ಕಾಗಿ ಕಲ್ಪನೆಯು William R. Nicholson, *The Six Miracles of Calvary* (Chicago: Moody Press, 1928). Nicholson's ಅವರ "ಆರು ಅದ್ಭುತಗಳು" ಎನ್ನುವ ಸಂದೇಶವು ಕ್ರಮವಾಗಿ ನಾರು ಬಟ್ಟೆಗಳು ಖಾಲಿಯಾದ ಸಮಾದಿಯಲ್ಲಿ ಬಿಡಲ್ಪಟ್ಟವು ಎನ್ನುವ ಅಂಶವು ಮತ್ತು ಸತ್ತವನು ಜೀವಿತನಾಗಿ ಬರುವಾಗ ಆ ಬಟ್ಟೆಗಳಿಂದ ಬೇರ್ಪಟ್ಟನ್ನು ಎನ್ನುವ ಅಂಶವು ಒಳಗೊಂಡಿದೆ. ಈ ಸಂದೇಶವು ಕೇವಲ ನಾಲ್ಕು ಅದ್ಭುತಗಳನ್ನು ಹೆಸರಿಸಲಾಗಿದೆ. ಇದು ನಾರು ಬಟ್ಟೆಗಳನ್ನು ಬಿಡಲಾಗಿದೆ ಮತ್ತು ಸಮಾದಿ ತೆಗೆಯಲ್ಪಟ್ಟು ಸತ್ತವರು ಎದ್ದು ಬಂದಿದರ ವಿಷಯ ಸೇರಿಸಿದ್ದಾರೆ. [2]ಮೌಂಟ್ ಎವರೆಸ್ಟ್, ಪ್ರಪಂಚದಲ್ಲಿ ಎತ್ತರವಾದ ಪರ್ವತವಾಗಿದೆ, ಇದು ಹಿಮಾಲಯದ ಮಧ್ಯದಲ್ಲಿ ನೇಪಾಳ ಮತ್ತು ಟಿಬೇಟ್‌ನ ಗಡಿಯ ಮೇಲೆ ಇರುವಂಥದ್ದಾಗಿದೆ. ಇದು ಎರಡು ಶಿಖರಗಳನ್ನು ಹೊಂದಿದೆ ಅದರಲ್ಲಿ ಎತ್ತರವಾಗಿರುವದು (ಉತ್ತರ ಶಿಖರ ಎಂದು ಕರೆಯಲಾಗಿದೆ) 29,035 ಅಡಿ (8,853.5 ಮೀಟರ್) ಎತ್ತರಕ್ಕೆ ಮುಟ್ಟುತ್ತದೆ. [3]Nicholson, 17. [4]"ಅಪಶಕುನ"ನಿಗೆ *ಚಿಹ್ನೆ* ಗುರುತಿಸಲು ಮುಖ್ಯವಾದದ್ದಾಗಿದೆ (ಅಥವಾ ವಿಪತ್ಕಾರದ) ಇದು ಆಗುವಂಥದ್ದಾಗಿದೆ. [5]"Origen ಮತ್ತು Eusebius ಹೇಳಿದ್ದೇನೆಂದರೆ ರೋಮಾ ಇತಿಹಾಸಕಾರ ಕಾರ್ಗತ್ತಲು ... ನ್ನು ದಾಖಲಿಸಿದ್ದಾರೆ" (R. C. Foster, *Studies in the Life of Christ* [Grand Rapids, Mich.: Baker Book House, 1971], 1282). Tertullian, ಕ್ರೈಸ್ತ ಧರ್ಮಪ್ರತಿಪಾದಕ, ಈ ಅಂಶವನ್ನು ರೋಮನ್ನರ ಸಾರ್ವಜನಿಕ ದಾಖಲಾತಿಯಲ್ಲಿ ಇದೆ ಎಂದು ಸೂಚಿಸುತ್ತಾನೆ (Tertullian *Apology* 21.20). [6]ವಾದಮಾಡಲು ಹೆಚ್ಚಿನದ್ದಾಗಿ "ಶಿಲುಬೆಯ ಮೇಲೆ ಆರು ಘಂಟೆಗಳು" ಎನ್ನುವ ಅಧ್ಯಾಯದಲ್ಲಿ ಸೇರಿಸಲಾಗಿದೆ, ಈ ಗ್ರಹಣವನ್ನು ಕೇವಲ ಕೆಲವು ನಿಮಿಷಗಳು ಆಲೋಚಿಸಿದ್ದಾರೆ ಆದರೆ ಕಾರ್ಗತ್ತಲು ಮೂರು ಘಂಟೆಗಳ ಕಾಲ ಆಲೋಚಿಸಿದ್ದಾರೆ. [7]ನಿಮಗೆ "ಸಮಯ"ದ ವಾದ ಪುನರಾವರ್ತನೆ ಮಾಡಬೇಕಾಗಿರಬಹುದು ಇದನ್ನು "ಶಿಲುಬೆಯ ಮೇಲೆ ಆರು ಘಂಟೆಗಳು" ಎನ್ನುವ ಅಧ್ಯಯದಲ್ಲಿ ಸೇರಿಸಲಾಗಿದೆ. [8]ತಿಳಿಸಿರುವದು ಕಾರ್ಗತ್ತಲಿನಲ್ಲಿ ಗರ್ಜಿಸುವ ಜನರು ಮೌನವಾಗಿದ್ದರು ಎಂದು ಮೌನದ ಕುರಿತು ಈ ಪಠ್ಯ ಹೇಳುತ್ತದೆ. ಮೂರು ತಾಸುಗಳ ಮುಂಚೆ ಜನರು ಅವಮಾನ ಮಾಡುತ್ತಿದ್ದರು; ಮೂರು ತಾಸಿನ ನಂತರ ಅದೆ ಜನರು ತಮ್ಮ ಎದೆಯನ್ನು ಬಡಕೊಳ್ಳುತ್ತಿದ್ದಾರೆ (ಲೂಕ 23:48). [9]ಈ ಅಧ್ಯಾಯ ನೋಡಿರಿ "ಯೇಸು ಶಿಲುಬೆ ಮೇಲೆ ಯಾಕೆ ಸಾಯಬೇಕಿತ್ತು?" ಈ ಪುಸ್ತಕದಲ್ಲಿ ಕಂಡುಕೊಳ್ಳುವಿರಿ. [10] "Terra firma" ಅಂದರೆ ಲ್ಯಾಟೀನ್ ಪದದ ಅರ್ಥ "ಭದ್ರವಾದ ನೆಲ" ಅಥವಾ "ಉತ್ತಮವಾದ ಮೈದಾನ" ಎಂದಾಗಿದೆ.

[11]ರಿಕ್ಟರ್ ಮಾಪಕ ಭೂಕಂಪದ (ತೀವ್ರತೆ) ಅಳೆಯುತ್ತದೆ. ಇದರ ಹೆಸರನ್ನು ಆತನಿಗೆ ಗೌರವಿಸಲು Charles Richter, ಎಂದಿಡಲಾಗಿದೆ. ಇದನ್ನು ಅಳೆಯುವದರಲ್ಲಿ ತುಂಬಾ ಪ್ರಸಿದ್ಧವಾಯಿತು. ಆ ಹೆಸರನ್ನು ಇಡಲಾಗಿದೆ. [12]ಭೂಕಂಪ ಉಂಟಾಗಲು ಅನೇಕ ಕ್ರಮವಾದ ಅಂಶಗಳಿವೆ, ದೇವರು ಈ ಯಂತ್ರವನ್ನು ಇಟ್ಟಿರಬಹುದು, ಆದರೆ ಆ ಘಟನೆಯ ಸಮಯವು ಇದಕ್ಕಿಂತಲೂ ಹೆಚ್ಚಿನದು ಒಳಗೊಂಡಿದೆ ಎಂದು ತಿಳಿಸುತ್ತದೆ. ಇದು ಆಗುವದಕ್ಕೆ ದೇವರ ಧ್ಯೆಯವಿದೆ. [13]"ಮುಕ್ತಾಯವಾಯಿತು" ಎನ್ನುವ ಶಬ್ದದ ಮೇಲೆ ಟಿಪ್ಪಣಿಗಳನ್ನು ನೋಡಿರಿ ಅದನ್ನು "ಶಿಲುಬೆ ಮೇಲೆ ಆರು ಘಂಟೆಗಳು" ಎನ್ನುವ ಅಧ್ಯಾಯದಲ್ಲಿ ನೋಡುವಿರಿ. [14]ಲೂಕನ ಪ್ರಕಾರ ಮುಸುಕು ಹಾಗಿರುವದನ್ನು ತೆಗೆದುಕೊಂಡಿದ್ದಿಯಾದರೆ (ಲೂಕ 23:44, 45), ಆ ಮುಸುಕು ಮೂರು ಘಂಟೆಗಳ ಕತ್ತಲೆಕವಿದಾಗ ಆವರಿಸಿರಬಹುದು ಎನ್ನುವ ತೀರ್ಮಾನಕ್ಕೆ ನಾವು ಬರಬಹುದು. ಈ ಲೂಕನ ವಿಷಯವನ್ನು ಮತ್ತಾಯ, ಮತ್ತು ಮಾರ್ಕನೊಂದಿಗೆ ಹೋಲಿಸಿದರೆ ಈ ಮುಸುಕು ಆಗಿರುವದು "ಒಂಭತ್ತನೆಯ ತಾಸಿನಲ್ಲಿ" ಎಂದು ಅರ್ಥಮಾಡಿಕೊಳ್ಳಬಹುದು. [15]ದೇವಾಲಯದ ರೇಖಾ ಚಿತ್ರವನ್ನು ನೋಡಿರಿ. ನಂತರ ಈ ಪುಸ್ತಕದಲ್ಲಿ ಕಂಡುಕೊಳ್ಳುವಿರಿ. [16]1 ಅರಸುಗಳು 6:20 ನೋಡಿರಿ ಉದ್ದಳತೆಯ ಮನುಷ್ಯನ ಮೊಳಕೈಯಿಂದ ಆತನ ಮಧ್ಯ ಬೆರಳಿನವರೆಗೆ, ಹೆಚ್ಚು ಕಡಿಮೆ ಒಂದುವರೆ ಅಡಿ (43-56 ಸೆಂಟಿಮೀಟರ್). ನಿಮ್ಮ ಕೇಳುಗರಿಗೆ ಸಹಾಯ ಮಾಡಲು ಪರದೆಯ ಅಳತೆ 30 ಅಡಿ ಉದ್ದ 30 ಅಡಿ ಅಗಲ ತೋರಿಸಿರಿ, 30 ಅಡಿ ಎತ್ತರದ ಗುರುತನ್ನು ಹಾಕಿರಿ ಮತ್ತು 30 ಅಡಿ ವಿಸ್ತಾರವನ್ನು ತೆಗೆದುಕೊಳ್ಳಿರಿ. [17]ಬಾಬೇಲಿನವರು ಯೆರೂಸಲೇಮನ್ನು ನಾಶಪಡಿಸಿದ ಸಲೋಮೋನನ ದೇವಾಲಯವು ನಾಶವಾಯಿತು. ಇದನ್ನು ಜೆರುಬಾಬೆಲ್‌ನಿಂದ ಪುನ ಕಟ್ಟಲ್ಪಟ್ಟಿತ್ತು ಮತ್ತು ಮಹಾ ಯೆರೋದನಿಂದ ಕಟ್ಟಿಲ್ಪಟ್ಟಿತ್ತು. [18]ಗುಡಾರದಲ್ಲಿ ಏಳು ಕೊಂಬೆಯುಳ್ಳ ದೀಪಸ್ತಂಭವನ್ನು ಪರಿಶುದ್ಧ ಸ್ಥಾನದಲ್ಲಿ ಇಡಲ್ಪಟ್ಟಿತು (ವಿಮೋಚನಕಾಂಡ 25:31-35), ಆದರೆ ಸೊಲೊಮೋನನ ದೇವಾಲಯದಲ್ಲಿ ಹತ್ತು ದೀಪದ ಸ್ತಂಭಗಳು ಇದ್ದವು (1 ಅರಸು 7:49). [19]Nicholson, 41. [20]ಭೂಕಂಪವು ಗೊಲ್ಗೊಥಗೆ ಮುಟ್ಟವದರೊಳಗೆ (ಇದು ಹತ್ತಿರದ ಗೋರಿಗಳಿಗೆ ವಿಸ್ತಾರವಾಗಿತ್ತು; ಮತ್ತಾಯ 27:51, 52), ಮತ್ತು ಭೂಕಂಪದವರೆಗೆ ಮತ್ತು ಮುಸುಕು ಆವರಿಸಿರುವದು ಈ ಅಧ್ಯಾಯದಲ್ಲಿ ಜೋಡಿಸಲಾಗಿದೆ (ಮತ್ತಾಯ 27:51), ದೇವಾಲಯದ

ಪ್ರದೇಶ ಇದರಿಂದ ಪರಿಣಾಮ ಬೀರಿತು.

[21]ಹರಿದ ತೆರೆಯ ಕುರಿತು, ಹಾಗೂ ಅನೇಕ ಯಾಜಕರು ಕ್ರೈಸ್ತರಾದರು ಎಂದು ಇತರೆ ಯಾಜಕರು ಅರಿತಿದ್ದರು (ಅಪೊಸ್ತಲರ ಕೃತ್ಯಗಳು 6:7). [22]ಹರಿದ ತೆರೆಯನ್ನು ನಾನು ಒಪ್ಪಂದದ ಪತ್ರಕ್ಕೆ ಹೋಲಿಸುತ್ತೇನೆ (ಸಾಲವು ತೀರಿದ ನಂತರ ಆ ಪತ್ರವನ್ನು ಹರಿದು ಹಾಕುವವರಲ್ಲವೇ). ದೇವರು ಹಳೆಯ ಸಂಪ್ರದಾಯವನ್ನು ಹರಿದು ಹಾಕಿದನು. [23]ನೀನು ಬೋಧಿಸುವಾಗ ಅಥವಾ ಕಲಿಸುವಾಗ ಈ ಯೋಚನೆಯನ್ನು ವಿಸ್ತರಿಸಿ ನಿಮಗಾಗಿ ಉಪಯೋಗಿಸುಕೊ: ಕೆಲವೊಮ್ಮೆ ಹಳೆಒಡಂಬಡಿಕೆಯನ್ನು ಉಪಯೋಗಿಸಿ ಅಧಿಕಾರಕ್ಕಾಗಿ "ಮುಸುಕನ್ನು ಎಬ್ಬಿಸಲು" ಪ್ರಯತ್ನಿಸುತ್ತಾರೆ. ಕೆಲವೊಬ್ಬರು ಯಾವುದೇ ವಾಕ್ಯದಾರವಿಲ್ಲದ ಯಾಜಕತ್ವ ಸ್ಥಾಪಿಸಲು ಪ್ರಯತ್ನಿಸುತ್ತಾರೆ. ಇತರರು ಬೇರೆ ಬೇರೆ ಜನರ ಮಧ್ಯದಲ್ಲಿ ಅಡ್ಡಿ ಆತಂಕಗಳನ್ನು ಎಬ್ಬಿಸಲು ಪ್ರಯತ್ನಿಸುತ್ತಾರೆ. [24]ಪ್ರಾಚ್ಯವಸ್ತು ತಜ್ಞರು ಹತ್ತಿರದ ನೆರೆಹೊರೆಯಲ್ಲಿ ಅನೇಕ ಸಮಾದಿಸ್ಥಳಗಳು ಇದ್ದವು ಎಂದು ದೃಢಪಡಿಸುತ್ತಾರೆ. [25]"ಸಂತ" ಎನ್ನುವ ಶಬ್ದದದ ಅರ್ಥ "ಪ್ರತ್ಯೇಕವಾದವರು," ನಾವು ದೇವರ ಮಕ್ಕಳಾಗಿರುವಾಗ, ದೇವರ ಸೇವೆಗೆ ನಾವು ಪ್ರತ್ಯೇಕವಾದವರು. [26]ಜನರಿಗೆ ಅವರು ಯಾರಾಗಿದ್ದರು ಎನ್ನುವದು ತಿಳಿಯದಿದ್ದರೆ, ಅವರು ಬಹುಶಃ ಅವರನ್ನು ಪಟ್ಟಣದ ಹೊರಗಿನವರು ಎಂದು ಸ್ವಿಕೃತವಾಗುತ್ತಾರೆ. [27]ಇನ್ನೊಂದು ಅರ್ಥದಲ್ಲಿ, ಕ್ರಿಸ್ತನಂತೆ ಅವರ ಪುನರುತ್ಥಾನ ಇರುವುದಿಲ್ಲ, ಎಬ್ಬಿಸಲ್ಪಟ್ಟವರು ಪುನಃ ಸಾಯುವುದಿಲ್ಲ. [28]ನಾನು ಆಲೋಚಿಸ ಬಹುದು ಕೇವಲ ಮೂರ ಜನರು ಮಾತ್ರ ಹಳೆ ಒಡಂಬಡಿಕೆಯಲ್ಲಿ ಸತ್ತವರಿಂದ ಎದ್ದಿದ್ದಾರೆ (ನೋಡಿರಿ 1 ಅರಸು 17; 2 ಅರಸು 4; 13). ಯೇಸು ಕ್ರಿಸ್ತನ ಸೇವೆಯಲ್ಲಿ ಮೂರು ಜನ ಎದ್ದಿದ್ದಾರೆ (ಮತ್ತಾಯ 9; ಲೂಕ 7; ಯೋಹಾನ 11), ಮತ್ತು ಅಪೊಸ್ತಲರ ಸೇವೆಯ ಸಮಯದಲ್ಲಿ ಇಬ್ಬರು ಎಬ್ಬಿಸಲ್ಪಟ್ಟರು (ಅಪೊಸ್ತಲರ ಕೃತ್ಯಗಳು 9; 20) ರಲ್ಲಿ ದಾಖಲಿಸಲಾಗಿದೆ. [29]"ಪ್ರಥಮ ಫಲಗಳು" ಸುಗ್ಗಿಯಲ್ಲಿ ಪ್ರಥಮ ಭಾಗವು ದೇವರಿಗೆ ಸಮರ್ಪಿಸುವದು (ವಿಮೋಚನಕಾಂಡ 23:19). ಪ್ರಥಮ ಫಲಗಳು ಎನ್ನುವಾಗ ಅದರ ಕಲ್ಪನೆ ಏನೆಂದರೆ ಉಳಿದದ್ದೆಲವು ಸುಗ್ಗಿಯೆ ಖಚಿತವಾಗಿರುತ್ತದೆ. [30]ಒಬ್ಬನು ಕ್ರೈಸ್ತನಾಗುವದು ಹೇಗೆ ಎನ್ನುವ ಸಂಗತಿ ನಿನ್ನ ಕೇಳುಗನಿಗೆ ಹೇಳಬೇಕಾಗಿದೆ (ಮಾರ್ಕ 16:15, 16) ಮತ್ತು ತಪ್ಪು ಮಾಡುವ ಕ್ರೈಸ್ತನು ತಿರುಗಿ ಹೇಗೆ ಬರಬೇಕು ಎನ್ನುವದು ಹೇಳಬೇಕು (ಅಪೊಸ್ತಲರ ಕೃತ್ಯಗಳು 8:22; ಯಾಕೋಬ 5:16).



ಅಂತೋನಿಯನ
ಕೋಟೆ
ದೇವಾಲಯ
ಪಾಲೇಸ್ತೀನಿಯರ
ನ್ಯಾಯಲಯ
ಇಸ್ರಾಯೇಲ್ಯರ
ನ್ಯಾಯಲಯ
ಯಜ್ಞವೇದಿಕೆ
ಸುಂದರ
ದ್ವಾರ
ಮಹಿಳೆಯರ
ನ್ಯಾಯಲಯ
ಪರಿಶುದ್ಧ
ಅತಿಪರಿಶುದ್ಧ
ಪರಿಶುದ್ಧ
ಅರಮನೆ
ಸೊಲೊಮೋನನ
ಮುಖ್ಯಮಂಟಪ
ಅನ್ಯಜನರ
ನ್ಯಾಯಾಲಯ